# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.4
P.W.4

<u>ದಿನಾಂಕಃ 18-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ರಮೇಶ್ ಎನ್ |
| ತಂದೆಯ ಹೆಸರು | ಃ ನರಸಿಂಹಯ್ಯ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಹಮಾಲಿ ಕೆಲಸ |
| ವಾಸ | ಃ ಡಿ ಎಂ ಪಾಳ್ಯ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಸ್ಥಳಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದುಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

2) ಈಗ್ಯೆ 3 ವರ್ಷದ ಕೆಳಗಡೆ ಡಿ ಎಂ ಪಾಳ್ಯದಲ್ಲಿ ಇರುವ ನಮ್ಮ ಮನೆಯ ಮಾಲೀಕರು ಮೃತ ದೇಹ ಬಿದ್ದ ಜಾಗಕ್ಕೆ ನನ್ನನ್ನು ಹಾಗೂ ವೆಂಕಟೇಶ್ ನನ್ನು ಕರೆದಿರುತ್ತಾರೆ ಮತ್ತು ಪ್ರಕರಣ ಪಿರ್ಯಾದಿ ಹಾಜರಿದ್ದರು. ಒಂದು ಹೆಣ್ಣಿನ ಶವ ಇದ್ದ ಜಾಗಕ್ಕೆ ನಾವು ಹೋಗಿರುತ್ತೇವೆ. ಪಂಚನಾಮೆ ಜರೂಗಿಸಲು ಪೊಲೀಸರು ಅಲ್ಲಿಗೆ

ಬಂದಿರುತ್ತಾರೆ. ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಪೋಟೋಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ನಿಪಿ-9 ಮತ್ತು 10 ರಲ್ಲಿ ತಮ್ಮ ಭಾವಚಿತ್ರ ಇರುವುದಾಗಿ ಸಾಕ್ಷಿದಾರರು ನುಡಿಯುತ್ತಾರೆ ಹಾಗೂ ಇನ್ನು 2 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಪೋಟೋವನ್ನು ನಿಪಿ-17 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಪುನಃ 8 ಪೊಟೋಗಳನ್ನು ತೋರಿಸಲಾಗಿ ಸಾಕ್ಷಿ ನನಗೆ ಭಯವಾಗಿ ಅವುಗಳನ್ನು ನೋಡಿರುವುದಿಲ್ಲವೆಂದು ಹೇಳಿರುತ್ತಾರೆ. ಪಂಚನಾಮೆಗೆ ಸಹಿ ಮಾಡುವ ಕಾಲದಲ್ಲಿ ನಾನು ಒಬ್ಬನೇ ಸಹಿ ಮಾಡಿರುತ್ತೇನೆ .

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

3) ನಾನು ಕಳೆದ 16 ವರ್ಷಗಳಿಂದ ಡಿ ಎಂ ಪಾಳ್ಯದಲ್ಲಿ ವಾಸವಾಗಿರುತ್ತೇನೆ. ಚಾಸಾ-1 ರವರಿಗೆ ಸೇರಿದ ಮನೆಯಲ್ಲಿ ನಾನು ವಾಸವಿರುತ್ತೇನೆ. ನಾನು ವಾಸವಾಗಿರುವ ಕಟ್ಟಡದಲ್ಲಿ 4 ಮನೆಗಳಿವೆ. 4 ಮನೆಗಳು ಒಂದಕ್ಕೊಂದು ಹೊಂದಿಕೊಂಡತೆ ಇರುತ್ತದೆ. ಸದರಿ ಮನೆಗಳಲ್ಲಿ ಯಾರು ಯಾರು ವಾಸಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅಂಜಲಿ ಎಂಬುವರು ಒಂದು ಮನೆಯನ್ನು ಬಾಡಿಗೆ ತೆಗೆದುಕೊಂಡಿದ್ದರು, ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇರುತ್ತಾರೆ. ಆ ಹೆಂಗಸು ಈಗ ಜೀವಂತವಾಗಿಲ್ಲ ಅಂದರೆ ಸರಿ . ವೆಂಕಟೇಶ್ ಸಹ ನನ್ನ ಜೊತೆ ಹಾಜರಿದ್ದು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಪೋಲೀಸರ ಜೊತೆ ನಾನು ಹೋಗಿರುತ್ತೇನೆ ಅಂದರೆ ಸರಿ . ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ ಅಂದರೆ ಸರಿ . ಪೋಟೋದಲ್ಲಿ ನಾನು ಮನೆಯ ಒಳಗೆ ನಿಂತಿರುವ ಭಾವಚಿತ್ರ ವಿರುತ್ತದೆ ಅಂದರೆ ಸರಿ . ನಿಪಿ-9 ರಲ್ಲಿಯೂ ಸಹ ಮೃತಳ ಮನೆಯ ಒಳಗೆ ತೆಗೆದಿರುವ ಭಾವಚಿತ್ರ ವಾಗಿರುತ್ತದೆ ಅಂದರೆ ಸರಿ. ನಿಪಿ-17 ರಲ್ಲಿ ವೆಂಕಟೇಶ್ ಇರುವುದಿಲ್ಲ . ರಾತ್ರಿ ಸಮಯದಲ್ಲಿ ವಿದ್ಯುತ್ ಬೆಳಕಿನಲ್ಲಿ ಪೋಟೋಗಳನ್ನು ತೆಗೆಯಲಾಗಿರುತ್ತದೆ ಅಂದರೆ ಸರಿ . ನಾನು 2 ತರಹದಲ್ಲಿ ಸಹಿ ಮಾಡುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಡ್ ವೈಸ್ ಬೀರ್ 500 ಎಂ ಎಲ್ ನ ಒಂದು ಮದ್ಯದ ಖಾಲಿ ಟಿನ್ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಅಂಟಿಸಿರುವ ಸಹಿ ತನ್ನದು ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಮು ಮಾ-2 ನ್ನು ಸಾಕ್ಷಿದಾರರು

ನೋಡಿ ಗುರುತಿಸಿದ್ದು , ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ -2(ಎ) ಎಂದು ಗುರುತಿಸಲಾಯಿತು. ಎರಡು ಖಾಲಿ ಟಿನ್ ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದು ಕಿಂಗ್ ಫಿಷರ್ ಸ್ಟ್ರಾಂಗ್ ಬೀರ್ 330 ಎಂ ಎಲ್ ನ ಟಿನ್ ಆಗಿದ್ದು ಅದನ್ನು ಈಗಾಗಲೇ ಒಟ್ಟಾಗಿ ಮು ಮಾ-1 ಎಂದು ಗುರುತಿಸಲಾಗಿದ್ದು ಅದರಲ್ಲಿ ಇರುವ ಸಾಕ್ಷಿದಾರರ ಸಹಿಗಳನ್ನು ಮು ಮಾ-1(ಎ)(ಬಿ) ಎಂದು ಗುರುತಿಸಲಾಯಿತು. ಒಂದು ಇಕ್ಕಳವನ್ನು ಈಗಾಗಲೇ ಮು ಮಾ-3 ಎಂದು ಗುರುತಿಸಲಾಗಿದ್ದು , ಸದರಿ ವಸ್ತುವಿನ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-3(ಎ) ಎಂದು ಗುರುತಿಸಲಾಯಿತು. ಒಂದು ಕಬ್ಬಿಣದ ಚಾಕುವನ್ನು ಈಗಾಗಲೇ ಮು ಮಾ-4 ಎಂದು ಗುರುತಿಸಲಾಗಿದ್ದು , ಅದರ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ಮು ಮಾ-4(ಎ) ಎಂದು ಗುರುತಿಸಲಾಯಿತು. ಮೃತ ದೇಹದಿಂದ ಹೊರಬಂದ ರಕ್ತವನ್ನು ಹತ್ತಿಯಲ್ಲಿ ಶೇಖರಿಸಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಬದ್ರ ಪಡಿಸಿರುವುದನ್ನು ನನ್ನ ಮುಂದೆ ಜಪ್ತುಪಡಿಸಿಕೊಂಡಿರುವುದಿಲ್ಲ. ಅಂತೆಯೇ ಮೃತ ದೇಹದ ಅಕ್ಕ ಪಕ್ಕದಲ್ಲಿ ಬಿದಿದ್ದ ಖಾರದ ಪುಡಿಯನ್ನು ಒಂದು ಚೀಲಕ್ಕೆ ಹಾಕಿ ಸೀಲ್ ಮಾಡಿ ನಂತರ ಚೀಟಿಯ ಮೇಲೆ ಇರುವ ಸಹಿಯನ್ನು ಪಡೆದಿರುತ್ತಾರೆ. (ಮಾಲುಪಟ್ಟಿಸಂಖ್ಯೆ149-20 ದಿ 23-08-2020 ರ ಕ್ರಮ ಸಂಖ್ಯೆ 6 ರಲ್ಲಿ ಮೃತದೇಹದ ಅಕ್ಕಪಕ್ಕದಲ್ಲಿ ಬಿದಿದ್ದ ಖಾರದಪುಡಿಯನ್ನು ಒಂದು ಪ್ಲಾಸಿಕ್ ಡಬ್ಬಕ್ಕೆ ಹಾಕಿ ಅವುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಪ್ರತ್ಯೇಕವಾಗಿ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತದೆ ಎಂದು ನಮೂದಿಸಿದ್ದು , ಸದರಿ ಡಬ್ಬದಲ್ಲಿ ಯಾವುದೇ ಖಾರದ ಪುಡಿ ಇರುವುದಿಲ್ಲ. )

ಸದರಿ ಡಬ್ಬಿಯನ್ನು ಸೀಲ್ ಮಾಡಿದ ಚೀಲದ ಮೇಲೆ ಅಂಟಿ ಸಿ ಸಹಿ ಪಡೆದಿದ್ದು , ಸಾಕ್ಷಿದಾರರು ಸಹಿ ನೋಡಿ ಗುರುತಿಸಿದ್ದು ಸದರಿ ಚೀಲವನ್ನು ಮುಮಾ-8 ಎಂದು, ಸಾಕ್ಷಿದಾರರ ಸಹಿಯನ್ನು ಮುಮಾ8(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಕೃತ್ಯ ನಡೆದ ಸ್ಥಳ ಪಂಚನಾಮೆಯ ಸಮಯದಲ್ಲಿ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ನಂತರ ಶವವನ್ನು ಶವಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈಗ ನಾನು ಪಂಚನಾಮೆ ಮಾಡುವ ಸಮಯದಲ್ಲಿ ಇದ್ದಂತಹ ಮನೆಯಲ್ಲಿ ವಾಸವಿರುವುದಿಲ್ಲ. ಈಗ ನಾನು ವಾಸವಾಗಿರುವ ಮನೆಯ ಮಾಲೀಕರು ನರಸಿಂಹಮೂರ್ತಿಯವರು. ಮೃತಳ ಹೆಸರು ಅಂಜಲಿ ಎಂದು ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ದಿ 28-08-2020 ರಂದು ಸ್ಥಳ ಪಂಚನಾಮೆಯನ್ನು ರಾತ್ರಿ 10.55 ರಿಂದ 11.55 ರ ಸಮಯದಲ್ಲಿ ಮಾಡಿರುತ್ತಾರೆ ಅಂದರೆ ಸರಿ. ಮೃತ ಅಂಜಲಿಯನ್ನು ಆತ್ಯಾಚಾರ ಮಾಡಿ ಕೊಲೆ ಮಾಡಿರುವುದು ಕಂಡು ಬರುತ್ತದೆ ಎಂಬ ವಿಚಾರದಲ್ಲಿ ಪೊಲೀಸರು ಪಂಚನಾಮೆ ಜರೂಗಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **4** ನೇ ಆರೋಪಿಗಳ ಪರ ಶ್ರೀ ಬಿ ಕೆ ಪಿ ವಕೀಲರಿಂದಃ</u>

4) ಪೊಲೀಸರು ನನಗೆ ಪಂಚನಾಮೆಗೆ ಭಾಗವಹಿಸಲು ನೋಟೀಸ್ ಕೊಟ್ಟಿರುವುದಿಲ್ಲ ಅಂದರೆ ಸರಿ . ನಾನು ವಾಸವಾಗಿದ್ದ ಮನೆಗೂ ಮತ್ತು ಉದಯ್

ಕುಮಾರ್ ರವರ ಮನೆಗೂ ಸುಮಾರು 800 ಮೀಟರ್ ಅಂತರವಿರುತ್ತದೆ. ನಾವು ಇರುವ ಏರಿಯಾ ಬೇರೆ ಅವರು ಇರುವ ಏರಿಯಾ ಬೇರೆ ಅಂದರೆ ನಿಜ. ನಿಪಿ-2 ರಲ್ಲಿ ಇರುವ ವಿಷಯ ನನಗೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಅಂದರೆ ನಿಜ. ಎಲ್ಲಾ ಸಹಿಗಳನ್ನು ಖಾಲಿ ಪೇಪರ್ ನ ಮೇಲೆ ತೆಗೆದುಕೊಂಡಿರುತ್ತಾರೆ ಅಂದರೆ ನಿಜ. ನನ್ನ ಸಹಿ ಅಂಟಿಸಿದ ಮುದ್ದೆ ಮಾಲುಗಳನ್ನು ನೋಡಿರುವುದಿಲ್ಲ ಅಂದರೆ ಸರಿ . ಅವುಗಳನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಂಡಿರುವುದಿಲ್ಲ ಅಂದರೆ ನಿಜ. ಪೊಲೀಸ್ ಠಾಣೆಯಲ್ಲಿ ಸುಮಾರು ನನ್ನ ಸಹಿ ಪಡೆದುಕೊಂಡರು. ಪೊಲೀಸರ ಕೋರಿಕೆಯ ಮೇರೆಗೆ ನಾನುಪೋಟೋವನ್ನು ತೆಗೆಸಿಕೊಂಡಿರುತ್ತೇನೆ , ಭಯಕ್ಕೆ ಮತ್ತು ವಾಸನೆಗೆ ನಾನು ನೋಡಿರುವುದಿಲ್ಲ. ಮೃತಳು ಹೇಗೆ ಮೃತಪಟ್ಟಳು ಎಂದು ನನಗೆ ಗೊತ್ತಿಲ್ಲ ಅಂದರೆ ನಿಜ. ಹಾಗಾಗಿ ನನಗೆ ಈ ಕೇಸಿನ ಯಾವುದೇ ಮಾಹಿತಿ ಇಲ್ಲ ಅಂದರೆ ನಿಜ.

2, 3,5 ನೇ ಆರೋಪಿ ಪರ ವಕೀಲರ ವಿನಂತಿಯ ಮೇರೆಗೆ 1,4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.
- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು